# Government of Karnataka
# Deposition Sheet (R.P.N.57) Form 4 Criminal
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 638/2018 |

ದಿನಾಂಕ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 7 ಪ್ರಾಸಾಃ 4

| | |
|---|---|
| ಹೆಸರು | ಶಾಹಲಂ |
| ತಂದೆಯ ಹೆಸರು | ಬಂಗಾರಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಎ ಎಸ್ ಐ ಗಬ್ಬೂರು ಪೋಲಿಸ್ ಠಾಣೆ |
| ವಾಸಸ್ಥಳ | ಗಬ್ಬೂರು |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ನಾನು 2015 ರಿಂದ 2021 ವರೆಗೆ ಮುಖ್ಯ ಪೋಲಿಸ್ ಪೇದೆಯಾಗಿ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 05-10-2018 ರಂದು ಬೆಳಿಗ್ಗೆ 8-00 ಗಂಟೆಯಿಂದ ಮಧ್ಯಹ್ನಾ 2-00 ಗಂಟೆಯವರೆಗೆ ನಾನು ಠಾಣೆ ಕರ್ತವ್ಯದಲ್ಲಿದ್ದಾಗ, ಬೆಳಿಗ್ಗೆ 10-30 ಗಂಟೆ ಸುಮಾರಿಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ಗಣಕೀಕೃತ ದೂರನ್ನು ಹಾಜರು ಪಡಿಸಿದ್ದು ಸದರಿ ದೂರನ್ನು ಪಡೆದುಕೊಂಡು, ಸದರಿ ಪ್ರಕರಣವು ಅಸಂಜ್ಞೆಯ ಸ್ವರೂಪದ್ದಾಗಿರುವುದರಿಂದ ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆದುಕೊಂಡು ನಾನು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂಬರ್ 380/2018 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 427, 504, 506, 511 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಅದೆ ದಿನಾಂಕದಂದು ಮಧ್ಯಾಹ್ನ 3-30 ರಿಂದ 4-30 ಗಂಟೆಯವರೆಗೆ ಪಂಚ ಸಾಕ್ಷಿದಾರರಾದ ಚಾಸಾ-5 ಮತ್ತು 6 ಇವರ ಸಮಕ್ಷಮ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿ ಪಿ 3 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ-2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ನಂತರ ಆರೋಪಿಯ ವಿರುದ್ದ ಸಾಕಷ್ಟು

ದೋಷಾರೋಪಣೆಗಳು ಕಂಡು ಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೇನೆ.

**ಪಾಟೀಸವಾಲು: ಶ್ರೀ ಪಿ ಟಿ ಎನ್ ವಕೀಲರಿಂದ :-**

1. ದೂರು ಕೊಡಲು ಪೋಲಿಸ್ ಠಾಣೆಗೆ ಚಾಸಾ-1 ರವರು ಒಬ್ಬರೆ ಬಂದಿರುತ್ತಾರೆ. ದೂರನ್ನು ಎಲ್ಲಿ ಟೈಪ್ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ದೂರಿನ ಅಂಶಗಳನ್ನು ಪರಿಶೀಲನೆ ಮಾಡಿರುತ್ತೇನೆ. ದೂರು ಪಡೆದುಕೊಂಡು ಎನ್ ಸಿ ನಂಬರ್ 24/2018 ರಂತೆ ಎನ್ ಸಿ ಪ್ರಕರಣ ದಾಖಲು ಮಾಡಿರುತ್ತೇನೆ. ಎನ್.ಸಿ. ಪ್ರಕರಣ ದಾಖಲು ಮಾಡಿದಾಗ ಸಮಯ 10-30 ಗಂಟೆ ಆಗಿರುತ್ತದೆ. ಅದೇ ದಿನದಂದು ನ್ಯಾಯಾಲಯದಿಂದ ಪರವಾನಿಗೆಯನ್ನು ಪಡೆದುಕೊಂಡು ಎಫ್ ಐ ಆರ್ ಯನ್ನು ಮಧ್ಯಾಹ್ನ 2-00 ಗಂಟೆಗೆ ದಾಖಲು ಮಾಡಿರುತ್ತೇನೆ. ದೂರಿನಲ್ಲಿ ದಿನಾಂಕ: 01-10-2018 ಎಂದು ನಮೂದು ಮಾಡಿರುತ್ತಾರೆ ಆದರೆ ಸದರಿ ದಿನಾಂಕದಂದು ದೂರನ್ನು ಸಲ್ಲಿಸಿರುವುದಿಲ್ಲ. ಶ್ರೀರಾಮ್ ಫೈನಾನ್ಸ್ ಕಂಪನಿ ಕೆ ಇ ಬಿ ಹತ್ತಿರ ಇರುತ್ತದೆ. ಅದರ ವಾರ್ಡ್ ನಂಬರ್ ಮತ್ತು ಕಟ್ಟಡದ ಮಾಲೀಕರ ಬಗ್ಗೆ ನನಗೆ ಮಾಹಿತಿ ಇಲ್ಲ. ದೂರಿನ ಪ್ರಕಾರ ಘಟನೆಯು ದಿನಾಂಕ: 26-09-2018 ರಂದು ಆಗಿರುತ್ತದೆ. ದೂರನ್ನು 10 ದಿನಗಳ ಕಾಲ ತಡವಾಗಿ ಕೊಟ್ಟಿರುವ ಬಗ್ಗೆ ಕಾರಣಗಳನ್ನು ತಿಳಿಸಿರುವುದಿಲ್ಲ. ಇದರ ಬಗ್ಗೆ ನಾನು ವಿಚಾರಣೆಯನ್ನು ಮಾಡಿರುವುದಿಲ್ಲ. ಚಾಸಾ-1 ರವರು ಪೋಲಿಸ್ ಠಾಣೆಯಲ್ಲಿ ಸುಮಾರು ಅರ್ದಗಂಟೆಯವರೆಗೆ ಬೆಳಿಗ್ಗೆ 11-00 ಗಂಟೆಯವರೆಗೆ ಇದ್ದರು. ಎಫ್ ಐ ಆರ್ ಆದ ನಂತರ ಮತ್ತೆ ಠಾಣೆಗೆ ಮಧ್ಯಾಹ್ನ 2-30 ಗಂಟೆಗೆ ಬಂದಿರುತ್ತಾರೆ.

2. ಅದೇ ದಿನ ಮಧ್ಯಾಹ್ನ 3-30 ರಿಂದ 4-30 ಗಂಟೆಯವರೆಗೆ ಗುನ್ಹೆ ಸ್ಥಳದ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆ ಮಾಡುವ ಕಾಲಕ್ಕೆ ಇತರೆ 03 ಜನ ಸಾಕ್ಷಿದಾರೆರು ಮತ್ತು ಪಂಚರು ಇದ್ದರು. ಪಂಚರನ್ನು ನಾನೇ ದೇವದುರ್ಗದಿಂದ ಕರೆಸಿರುತ್ತೇನೆ. ಗುನ್ಹೆ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸ್ಥಳದಿಂದ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿರುವುದಿಲ್ಲ. ಗುನ್ಹೆ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರ ಅಳವಡಿಸಿರುತ್ತಾರೆ ಅದರ ಪೋಟೆಜಗಳನ್ನು ನಾನು ಪಡೆದಿರುವುದಿಲ್ಲ ಮತ್ತು ನಾನು ಅದನ್ನು ಪರಿಶೀಲನೆ ಮಾಡಿರುವುದಿಲ್ಲ. ಸ್ಥಳದಲ್ಲಿ ಬಂದಿದ್ದ ಗ್ರಾಹಕರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಫೈನಾನ್ಸ್ ಕಂಪನಿಯ ಪರವಾನಿಗೆ ದಾಖಲೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಸ್ಥಳಕ್ಕೆ ಹೋದಾಗ ಪಡೆದಿರುತ್ತೇನೆ. ದಿನಾಂಕ: 05-10-2018 ರಂದು ಚಾಸಾ-1 ರವರು ಠಾಣೆಗೆ ಬಂದು ಲಿಖಿತ ದೂರು ಸಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರು ಪಡೆದುಕೊಂಡು ಮಾನ್ಯ ನ್ಯಾಯಾಲಯದಿಂದ ಎನ್ ಸಿ ಪರವಾನಿಗೆ ಪಡೆದುಕೊಂಡು ಪ್ರಕರಣ ದಾಖಲು ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ದಿನ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸಾಕ್ಷಿದಾರರ ಹೇಳೀಕೆಗಳನ್ನು ಪಡೆದುಕೊಂಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗದೇ ಇದ್ದರೂ ಸುಳ್ಳ ದೋಷಾರೋಪಣೆ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-

ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.